**ಕಿಷ್ಟಾ ಬಸಿಯುವ ಕೆರೆಯಿಂದ ಕೋಡಿಯಲ್ಲಿ ನೀರು ಹೋಗದೆ ಬೆಳೆ ನಾಶ**

1102 (1705) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಿಷ್ಟಾಪುರ ಬಸಿಯುವ ಕೆರೆ ನಿರ್ಮಾಣ ಮಾಡಿ ಇದರ ಕೋಡಿ (ವೇಸ್ಟಿಯರ್)ಯಲ್ಲಿ ನೀರು ಹೋಗದೆ ಬೆಳೆದ ಬೆಳೆ ನೀರಿನ ಪ್ರವಾಹದಿಂದ ಕೊಚ್ಚಿಕೊಂಡು ಹೋಗಿ ನಾಲ್ಕು-ಐದು ವರ್ಷಗಳಿಂದ ಭೂಮಿ ಬೀಳು ಬಿದ್ದು ರೈತರಿಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನೀರಿನ ಪ್ರವಾಹದಿಂದ ಪಕ್ಕದಲ್ಲಿ ಒಡೆದು ಹೋಗಿರುವ ಕೆರೆಯ ಏರಿ (ಬಂದ್) ಸಹ ಕೊಚ್ಚಿಕೊಂಡು ಹೋಗಿ ಇದರ ಕೆಳಗಿನ ಭೂಮಿ ಅಪಾಯ ಹಂತದಲ್ಲಿರುವುದು ನಿಜವೇ;

ಇ) ಬಸಿಯುವ ಕೆರೆಗಳನ್ನು ನಿರ್ಮಾಣ ಮಾಡುವುದು ನೀರನ್ನು ಕಾಪಾಡುವುದಕ್ಕಲ್ಲವೇ;

ಈ) ಈ ಬಸಿಯುವ ಕೆರೆ ನಿರ್ಮಾಣ ಮಾಡಿ ರೈತರ ಭೂಮಿಯನ್ನು ಹಾಳು ಮಾಡಿದ್ದೇಕೆ; ಇದರಿಂದ ರೈತರಿಗೆ ಹಾನಿ ಹಾಗೂ ಸರ್ಕಾರಕ್ಕೆ ಹಣ ನಷ್ಟವಲ್ಲವೇ?

ಉ) ಈ ಕೆರೆಯಿಂದ ನಷ್ಟವಾದ ಭೂ ಮಾಲೀಕರಿಗೆ ಪರಿಹಾರ ಹಣ ಕೊಡುವುದು ಯಾವಾಗ?

ಊ) ಈ ಬಸಿಯುವ ಕೆರೆಯನ್ನು ತಾಂತ್ರಿಕವಾಗಿ ಸರಿಪಡಿಸುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಪ್ರಶ್ನಿತ ಖಾಸಗಿ ವ್ಯವಸಾಯ ಜಮೀನು ಸದರಿ ಕೆರೆಯ ಜಲಾವೃತ ಪ್ರದೇಶದ ಪಕ್ಕದಲ್ಲಿದ್ದು ಕೆಳಮಟ್ಟದ ಸ್ವಲ್ಪ ಭಾಗ ಕೆಲವು ಸಮಯ ಮಾತ್ರ ಮುಳುಗಡೆಯಾಗುತ್ತದೆ. ಅಲ್ಲದೆ ಹಳ್ಳದಲ್ಲಿ ಅತೀಯಾದ ಮಹಾಪೂರ ಬಂದಾಗ ಮಾತ್ರ ಹೆಚ್ಚು ಭಾಗ ತಾತ್ಕಾಲಿಕವಾಗಿ ಜಲಾವೃತವಾಗುತ್ತದೆ. ಈ ರೀತಿ 1990ನೇ ಸಾಲಿನಲ್ಲಿ ಒಮ್ಮೆ ಮಾತ್ರ ಸಂಭವಿಸಿದ್ದು ಇದರಿಂದ ಯಾವುದೇ ವ್ಯವಸಾಯದ ಜಮೀನು ಕೊಚ್ಚಿಕೊಂಡು ಹೋಗಿರುವ ಪ್ರಮೇಯ ಇರುವುದಿಲ್ಲ. ಆದಾಗ್ಯೂ ಈ ತೊಂದರೆಯನ್ನು ನಿವಾರಿಸಲು ಒಂದು ರಕ್ಷಣಾ ಒಡ್ಡು ನಿರ್ಮಿಸಿ ಸದರಿ ಜಮೀನನ್ನು ನೆರೆಯಿಂದ ರಕ್ಷಿಸಬಹುದಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಮೇಲೆ ವಿವರಿಸಿದಂತೆ ಅತಿಯಾದ ಮಹಾಪೂರದಿಂದ ಸದರಿ ಜಮೀನಿಗೆ ನೆರೆಯ ಪ್ರವಾಹ ತಗ್ಗಿಸಲು ತಾತ್ಕಾಲಿಕವಾಗಿ ಕೆರೆಯ ಸ್ವಲ್ಪ ಭಾಗವನ್ನು ಕೆಳಮಟ್ಟಕ್ಕೆ ಇಳಿಸಲಾಗಿದ್ದು ಹೆಚ್ಚಿನ ನೀರನ್ನು ಮುಖ್ಯ ನಾಲಾಕ್ಕೆ ಸೇರುವಂತೆ ಮಾಡಲಾಗಿದೆ. ಈ ಉಪ ಕ್ರಮದಿಂದ ಕೆಳಗಿನ ಖಾಸಗಿ ಜಮೀನುಗಳಿಗೆ ಅಪಾಯ ಇರುವುದಿಲ್ಲ.

ಇ) ಹೌದು.

ಈ) ಪ್ರಶ್ನೆ "ಅ" ಮತ್ತು "ಆ" ರಲ್ಲಿ ವಿವರಿಸಿದ ಉಪ ಕ್ರಮದಿಂದಾಗಿ ರೈತರಿಗೆ ಹಾನಿ ಹಾಗೂ ಸರ್ಕಾರದ ಹಣದ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಶ್ನಿತ ಜಮೀನಿಗೆ ನೆರೆಯ ತೊಂದರೆ ಹೋಗಲಾಡಿಸುವ ಉದ್ದೇಶದಿಂದ ಉಪಕ್ರಮ ಕೈಗೊಳ್ಳಲಾಗುತ್ತಿದ್ದು ಭೂ ಮಾಲೀಕರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಮುಂಬರುವ ಮಳೆಗಾಲದೊಳಗಾಗಿ ಕೆರೆಯನ್ನು ಎಲ್ಲಾ ರೀತಿಯಿಂದ 1992ರ ಮೇ ಒಳಗಾಗಿ ಸರಿಪಡಿಸಿ ಮುಗಿಸಲಾಗುವುದು.

**ಬಂಗಾರುಪೇಟೆ ತಾಲ್ಲೂಕು ಕನಮನಹಳ್ಳಿ ರಸ್ತೆಯ ಅಭಿವೃದ್ಧಿ**

1104 (1707) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ-ಬಂಗಾರಪೇಟೆಯಿಂದ ಕನಮನಹಳ್ಳಿ ರಸ್ತೆಯ ಉದ್ದವೆಷ್ಟು?

ಆ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಯಾವಾಗ ವಶಕ್ಕೆ ತೆಗೆದುಕೊಳ್ಳಲಾಯಿತು?

ಇ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ನಂತರ ಖರ್ಚು ಮಾಡಿದ ಹಣವೆಷ್ಟು? ಖರ್ಚು ಮಾಡದಿದ್ದಲ್ಲಿ ಕಾರಣವೇನು?

ಈ) ಈ ರಸ್ತೆಯು ಅಂತರ ರಾಜ್ಯ ರಸ್ತೆಗಳಿಗೆ ಸೇರಿದ್ದರೂ ಸಹ. ಇದನ್ನು ಅಭಿವೃದ್ಧಿಪಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದ ಈ ಬಗ್ಗೆ ಕ್ರಮ ಕೈಕೊಳ್ಳುವುದೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಬೂದಿಕೋಟೆ ಕನಮನಹಳ್ಳಿ ರಸ್ತೆಯ ಒಟ್ಟು ಉದ್ದ 20.50 ಕಿ.ಮೀ.

ಆ) ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ 1987ರಲ್ಲಿ ತೆಗೆದುಕೊಳ್ಳಲಾಗಿದೆ.

| | ಲಕ್ಷ ರೂ.ಗಳು |
|---|---|
| ಇ) 1987-88ನೇ ಸಾಲಿನಿಂದ 1990-91ನೇ ಸಾಲಿನವರೆಗೆ | 1.90 |
| 1991-92ನೇ ಸಾಲಿನಲ್ಲಿ ಫೆಬ್ರವರಿ 92ರವರೆಗೆ | 5.28 |
| ಒಟ್ಟು | 7.18 |

ಈ) ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಯ ಅಭಿವೃದ್ಧಿ ಮಾಡುತ್ತಿದ್ದು ರಸ್ತೆ ಸಂಚಾರ ಯೋಗ್ಯವಾಗಿದೆ.

ಉ) ಬೂದಿಕೋಟೆ-ಕನಮನಹಳ್ಳಿ ರಸ್ತೆಗೆ 1991-92ನೇ ಸಾಲಿನಲ್ಲಿ ಯೋಜನೇತರ ಶೀರ್ಷಿಕೆಯಡಿ 3.00 ಲಕ್ಷ ರೂ. ಹಾಗೂ ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 6.00 ಲಕ್ಷ ರೂ.ಗಳಿಗೆ ಅಂದಾಜು ಮಂಜೂರಾಗಿದ್ದು, ಅಭಿವೃದ್ಧಿ ಕಾಮಗಾರಿಗಳು ಶೀಘ್ರ ಪ್ರಗತಿಯಲ್ಲಿದೆ.